13) ಮಂಗಳೂರು ತಾಲ್ಲೂಕಿನ ಅಣಬೆ ಗ್ರಾಮದ ಹತ್ತಿರ ಕರ್ನಾಟಕ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನವರು ವಶಪಡಿಸಿಕೊಂಡಿರುವ ಜಮೀನಿನ ಮಾಲೀಕರಿಗೆ ಪುನರ್‌ವಸತಿ ಕಲ್ಪಿಸುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಉಪಾಧ್ಯಕ್ಷರೇ, ೧೯೬೯ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಬೈಕಂಪಾಡಿ, ಪಣಂಬೂರು, ಅಣಬೆ ಗ್ರಾಮದ ೯೩೮ ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಕರ್ನಾಟಕ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿನವರು ಸ್ವಾಧೀನಪಡಿಸಿದ್ದು, ಭೂಸುಧಾರಣ ಕಾಯ್ದೆ ಬಂದಿದ್ದರೂ ಮೊದಲು ಜಮೀನ್ದಾರರಿಗೆ ಮಾತ್ರ ನಿವೇಶನಗಳನ್ನು ಅಲ್ಲಿಂದ ಹತ್ತು ಕಿಲೋಮೀಟರ್ ದೂರದ ಕಾಟಪಳ್ಳದಲ್ಲಿ ತಲಾ ೧೨ ಸೆಂಟ್ಸ್ ಸ್ಥಳ ನಿವೇಶನಕ್ಕೆ ಸಿಕ್ಕಿದ್ದರೂ ಒಕ್ಕಲು ಕುಟುಂಬಸ್ಥರಿಗೆ ಯಾವುದೇ ಮನೆ ನಿವೇಶನ ಅಥವಾ ಪರಿಹಾರ ಸಿಗದ ಕಾರಣ ೩೦ದಿಗೂ ಸುಮಾರು ೧೦೨ ಕುಟುಂಬಸ್ಥರು ಸದ್ರಿ ಬೋರ್ಡಿನವರು ಸ್ವಾಧೀನಪಡಿಸಿದ ಸ್ಥಳದಲ್ಲಿಯೇ ವಾಸ್ತವಿಸಿಕೊಂಡು ಬರುತ್ತಿದ್ದಾರೆ. ಆದರೆ ಬೋರ್ಡಿನವರು ಅವರನ್ನು ಸದ್ರಿ ಸ್ಥಳವನ್ನು ತೆರವು ಮಾಡಲು ಒತ್ತಾಯಿಸುತ್ತಿದ್ದಾರೆ.

ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿನವರು ಈಗಾಗಲೇ ಸ್ವಾಧೀನಪಡಿಸಿದ ಸುಮಾರು ೭೦೦ ಎಕರೆ ಭೂಮಿಯನ್ನು ಮಾತ್ರ ಕೈಗಾರಿಕಾ ನಿರ್ಮಾಣದ ಉದ್ದೇಶಕ್ಕೆ ಉಪಯೋಗಿಸಿಕೊಂಡಿದ್ದು ಉಳಿದ ಸುಮಾರು ೨೦೦ ಎಕರೆ ಜಾಗ ನಿರ್ವಾಸಿತರ ಪರಿಸರದಲ್ಲಿ ಬಾಕಿ ಇರುವುದು ಗಮನಾರ್ಹ ಆದ್ದರಿಂದ ಈ ೧೦೨ ಕುಟುಂಬಸ್ಥರಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಯಿಂದ ಸಂಬಂಧಪಟ್ಟವರಿಗೆ ಹಲವಾರು ಸಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸದ್ರಿ ಕುಟುಂಬಸ್ಥರು ಯಾವುದೇ ಭರವಸೆ ಇಲ್ಲದೆ ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ ಬೋರ್ಡಿನವರ ಸ್ವಾಧೀನವಿರುವ ಪ್ರದೇಶದ ಉತ್ತರ ಪಾರ್ಶ್ವದಲ್ಲಿ ಸುಮಾರು ೨೦ ಎಕರೆ ಜಾಗವನ್ನು ತೆಗೆದುಕೊಂಡು ಅಲ್ಲಿ ವ್ಯವಸ್ಥೆ ಮಾಡಿ ಸದ್ರಿ ಕುಟುಂಬಸ್ಥರಿಗೆ ಪುನರ್ವಸತಿ ಕಲ್ಪಿಸಿಕೊಡಬೇಕಾಗಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಹೆಚ್. ಆರ್. ರಾಜು.—ಉತ್ತರವನ್ನು ಆಮೇಲೆ ತರಿಸಿಕೊಡುತ್ತೇನೆ.

ಕೋಕೋ ಮತ್ತು ರಬ್ಬರ್ ಬೆಳೆಗಳನ್ನು ಕರ್ನಾಟಕ ಅರಣ್ಯ ಕಾಯಿದೆಯಿಂದ ಹೊರತುಪಡಿಸುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಉಪಾಧ್ಯಕ್ಷರೇ, ಕಾರ್ಕಳದಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಕೋ, ಕೋಡು, ರಬ್ಬರು ಹಾಲು ಮತ್ತು ರಬ್ಬರು ಹಾಳಿಗಳನ್ನು ಸಾವಿರಾರು ರೈತರು ಬೆಳೆಸುತ್ತಿದ್ದಾರೆ ಅವು ನಿಜವಾಗಿಯೂ ಕಾಡು ಉತ್ಪತ್ತಿಗಳು. ಅದನ್ನೀಗ ಕರ್ನಾಟಕ ಅರಣ್ಯ ಕಾಯಿದೆಗೆ ಒಳಪಡಿಸಲಾಗಿದೆ. ಇದರಿಂದಾಗಿ ನಿಜವಾದ ರೈತರಿಗೆ ಭಾರೀ ಕಿರುಕುಳವುಂಟಾಗಿರುತ್ತದೆ. ಭ್ರಷ್ಟಾಚಾರಕ್ಕೂ ಇದರಿಂದ ಅವಕಾಶ ಒದಗುತ್ತದೆ.

ಆದಕಾರಣ ಕೋಕೋ ಮತ್ತು ರಬ್ಬರ್ ಬೆಳೆಗಳನ್ನು ಕರ್ನಾಟಕ ಅರಣ್ಯ ಕಾಯಿದೆಯಿಂದ ಹೊರತುಪಡಿಸಬೇಕು. ಕೋಕೋ ಮತ್ತು ರಬ್ಬರು ಕಾಡು ಉತ್ಪನ್ನಗಳೆಂದು ಪರಿಗಣಿಸಬೇಕು, ಹಾಗಾದಲ್ಲಿ ಮಾತ್ರ ಸದ್ರಿ ಬೆಳೆ ಬೆಳೆಸುವ ರೈತರಿಗೆ ಪ್ರಯೋಜನವಾಗುತ್ತದೆ, ಈ ಕುರಿತು ಕೃಷಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಸರ್ಕಾರದನಿಗಮಗಳ ರಬ್ಬರ್ ಮತ್ತು ಕೋಕೋ ನೆಡುತೋಪ್ಪುಗಳಲ್ಲಿ ಬೆಳೆಯುವ ರಬ್ಬರ್ ಮತ್ತು ಕೋಕೋಮಿನ ಕಳ್ಳಸಾಗಾಣಿಕೆಯಾಗದಿರುವ ರೀತಿಯಲ್ಲಿ ತಡೆಗಟ್ಟಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯನ್ನು ಆವಲಂಬಿಸಿ ಕರ್ನಾಟಕ ಅರಣ್ಯ ಅಧಿನಿಯಮ ೧೯೬೩ಕ್ಕೆ ತಿದ್ದುಪಡಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಈ ಪ್ರಸ್ತಾವನೆಯ ಪ್ರಕಾರ ರಬ್ಬರ್ ಲ್ಯಾಟಿಕ್ಸ್ ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ್ನು ಅರಣ್ಯಗಳಲ್ಲಿರಲಿ ಅಥವಾ ಅರಣ್ಯಗಳಿಂದಾಗಲೀ ಅಥವಾ ಇನ್ನಾವುದೇ ಮೂಲ

ದಿಂದಾಗಲೀ ತರಲಿ ಅದನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸಬೇಕಿತ್ತು. ಸರ್ಕಾರವು ದಿನಾಂಕ ೫೬-೩-೧೯೮೮ರ ಅಧಿಸೂಚನೆಯ ಸಂಖ್ಯೆ ಎಲ್‌ವಿಡಬ್ಲ್ಯೂ ೧೦ ಎಲ್‌ಜಿಎಸ್ ೮೭ರಲ್ಲಿ "ರಬ್ಬರ್ ಲ್ಯಾಟಿಕ್ಸ್" ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ್ನು ಕರ್ನಾಟಕ ಅರಣ್ಯ ಆಧಿನಿಯಮದ ನಿಯಮ (೨)ರ ಕೆಳಗಿನ ಉಪ ನಿಯಮ (೭) ಸೇರಿಸಲು ತಿದ್ದುಪಡಿಯನ್ನು ಹೊರಡಿಸಿತು. ಅದರ ಪ್ರಕಾರ "ರಬ್ಬರ್ ಲ್ಯಾಟಿಕ್ಸ್ ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್" ಅರಣ್ಯ ಉತ್ಪನ್ನ ವಾಗಿರುತ್ತದೆ. ಮೇಲ್ಕಂಡ ಆಧಿಸೂಚನೆಯ ಪ್ರಕಾರ ಅರಣ್ಯಗಳಿಂದ ಮಾತ್ರವಲ್ಲದೆ ಬೇರೆ ಯಾವುದೇ ಮೂಲದಿಂದಾಗಲೀ ರಬ್ಬರ್ ಲ್ಯಾಟಿಕ್ಸ್, ಕೋಕೋ ಬೀನ್ಸ್ ಮತ್ತು ಪಾಡ್ಸ್‌ನ್ನು ತಂದರೂ ಸಹ ಅದು ಅರಣ್ಯ ಉತ್ಪನ್ನವಾಗಿರುತ್ತದೆ ಮತ್ತು ಅದರ ಸಾಗಾಣಿಕೆಗೆ ಈಗ ಪರವಾನಗಿ ಬೇಕಾಗಿರುತ್ತದೆ.

ಸರ್ಕಾರಕ್ಕೆ ಅನೇಕ ವರ್ತುಲಗಳಿಂದ ಇದರ ಬಗ್ಗೆ ಆದ ತೊಂದರೆಗಳ ಬಗ್ಗೆ ಆರ್ಜಿಗಳು ಬಂದಿದರಿಂದ ಇನ್ನೊಂದು ಪರಿಷ್ಕೃತ ಪ್ರಸ್ತಾವನೆಯು ಅರಣ್ಯ ಇಲಾಖೆಯಿಂದ ಬಂದಿದ್ದು ಇದರ ಪ್ರಕಾರ ಅರಣ್ಯಗಳಲ್ಲಿ ಕಂಡುಬಂದ ಮತ್ತು ಅರಣ್ಯಗಳಿಂದ ತಂದ ರಬ್ಬರ್ ಲ್ಯಾಟಿಕ್ಸ್, ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ ಉತ್ಪನ್ನಗಳನ್ನು ಮಾತ್ರಾ ಅರಣ್ಯ ಉತ್ಪನ್ನವೆಂದು ಪರಿಗಣಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—(ಮಾನ್ಯ ಸದಸ್ಯರು ಹಾಜರಿರಲಿಲ್ಲ)*

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ಬೇಡಿಕೆಗಳನ್ನು ಮಂಡಿಸುವುದು.

Financial Business

Discussion and voting of the Demands for grants for the year 1990-91 D. No. 23—Food and Civil Supplies 26—Transport, Motor Vehicles. 30, 55-56—Cooperation of Regelated Markets.

ಶ್ರೀ ಅಜೀಜ್ ಸೇಠ್.—(ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳು).—

Demand No. 23—Food and Civil Supplies *

MADAM, on the recommendation of the Governor, I beg to move:

"That a sum not exceeding Rs. 50,16,06,000 on Revenue Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of food and Civil Supplies".

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಖಾತೆ ರಾಜ್ಯ ಮಂತ್ರಿಗಳು)—

ಅಭಿಯಾಚನೆ ಕ್ರಮಾಂಕ ೩೬—ವಾಹನ ತೆರಿಗೆ

ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮.೭೦,೦೦,೦೦೦ ರೂಪಾಯಿಗಳಿಗಿಂತ ವಿೂರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಹಾಗೂ

ಅಭಿಯಾಚನೆ ಕ್ರಮಾಂಕ ೩೦— ರಸ್ತೆ ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ೫೦,೦೦ ೦೦೦ ರೂಪಾಯಿಗಳಿಗಿಂತ ವಿೂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೬,೦೦,೦೦೦ ರೂಪಾಯಿಗಳಿಗಿಂತ ವಿೂರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.